ಮತ್ತು ಇತರೆ ವಿಷಯಗಳಲ್ಲಿ ಅಕ್ರಮಗಳು ಪತ್ತೆಯಾಗಿವೆ; (ಪೂರ್ಣ ವಿವರಗಳನ್ನು ಒದಗಿಸುವುದು);

ಆ) ಈ ಅಕ್ರಮ ವ್ಯವಹಾರಗಳಲ್ಲಿ ಭಾಗಿಯಾಗಿರುವವರ ವಿವರಗಳೇನು ;

ಇ) ಸರ್ಕಾರವು ಈ ವಿಷಯದಲ್ಲಿ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ. ಎಸ್. ರಾಮ್‌ದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ

ಆ) ಮಾನ್ಯ ಲೋಕಾಯುಕ್ತರಿಂದ ತನಿಖಾ ವರದಿ ಸ್ವೀಕರಿಸಲ್ಪಟ್ಟಿದ್ದು ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

ಅಸಂಘಟಿತ ವಲಯದ ಕಾರ್ಮಿಕರಿಗೆ ಪಿಂಚಣಿ ಯೋಜನೆ

518 (767) ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಕಾರ್ಮಿಕ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಯಾವ ಯಾವ ಕಾರ್ಮಿಕರನ್ನು ಅಸಂಘಟಿತ ಕಾರ್ಮಿಕ ವಲಯಕ್ಕೆ ಸೇರಿಸಲಾಗಿದೆ ಮತ್ತು ಇವರಿಗೆ ಸರ್ಕಾರದಿಂದ ಯಾವ ಯಾವ ಸೌಲಭ್ಯಗಳನ್ನು ಒದಗಿಸಿಕೊಡಲಾಗುತ್ತಿದೆ;

ಆ) ಈ ಅಸಂಘಟಿತ ಕಾರ್ಮಿಕ ವಲಯಕ್ಕೆ ಸೇರಿದ ಕಾರ್ಮಿಕರನ್ನು ಪಿಂಚಣಿ ಯೋಜನೆಯ ವ್ಯಾಪ್ತಿಗೆ ತರುತ್ತಿರುವುದು ನಿಜವಲ್ಲವೇ; ಹಾಗಿದ್ದಲ್ಲಿ, ಇದಕ್ಕಾಗಿ ಇವರುಗಳು ಎಷ್ಟು ವಂತಿಗೆಯನ್ನು

ನೀಡಬೇಕಾಗಿದೆ; ಸರ್ಕಾರದ ವತಿಯಿಂದ ಕಾರ್ಮಿಕರ ಪರವಾಗಿ ಎಷ್ಟು ಹಣವನ್ನು ಪಾವತಿಸಲಾಗುವುದು; ಇದಕ್ಕಾಗಿ ಈ ಸಾಲಿನ ಬಜೆಟ್‌ನಲ್ಲಿ ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ; ಕಳೆದ ಒಂದು ವರ್ಷದಿಂದ ಕೇಂದ್ರದಿಂದ ಇದಕ್ಕೆ ನೆರವೇನಾದರೂ ಬಂದಿದೆಯೇ; ಹಾಗಿದ್ದಲ್ಲಿ ಇದರ ವಿವರಗಳೇನು ?

ಇ) ಇಲ್ಲಿಯವರೆಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಎಷ್ಟು ಜನರು ಈ ಯೋಜನೆಯ ವ್ಯಾಪ್ತಿಗೆ ಸೇರಲು ಮುಂದೆ ಬಂದಿದ್ದಾರೆ; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಈ) ರಾಜ್ಯದಲ್ಲಿ ಅಸಂಘಟಿತ ವಲಯದ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ, ಕಾರ್ಮಿಕ ಇಲಾಖೆಯ ವತಿಯಿಂದ ಇವರುಗಳನ್ನು ಕಡ್ಡಾಯವಾಗಿ ಪಿಂಚಣಿ ಯೋಜನೆಗೆ ಸೇರಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ; ಈ ವಲಯದ ಕಾರ್ಮಿಕರಿಗೆ ಪಿಂಚಣಿ ಯೋಜನೆಯ ಬಗ್ಗೆ ಅರಿವು ಮೂಡಿಸಲು ಸರ್ಕಾರ ಯಾವ ಯಾವ ರೂಪ ರೇಷೆಗಳನ್ನು ಸಿದ್ಧಪಡಿಸಿದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):–

ಅ) ಪ್ರಥಮ ಹಂತದಲ್ಲಿ ದರ್ಜಿಗಳು, ದೋಬಿಗಳು, ಹಮಾಲರು, ಆಟೋ ಮತ್ತು ಟ್ಯಾಕ್ಸಿ ಚಾಲಕರು ಹಾಗೂ ಹೋಟೆಲ್ ಕಾರ್ಮಿಕರನ್ನು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಯೋಜನೆಯ ಅಡಿಯಲ್ಲಿ ತರಲು ಹಾಗೂ ಈ ಕೆಳಗಿನ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

1) ಅಂತಿಮ ಸಂಸ್ಕಾರದ ಧನಸಹಾಯ. 2) ಶೈಕ್ಷಣಿಕ ಧನಸಹಾಯ (ಕಾರ್ಮಿಕರ ಇಬ್ಬರು ಮಕ್ಕಳಿಗೆ) 3) ಅಪಘಾತದಿಂದ

ದುರ್ಬಲತೆ / ಮರಣ ಹೊಂದಿದವರಿಗೆ ಧನಸಹಾಯ, 4) ಪಿಂಚಣಿ ಯೋಜನೆ.

ಆ) ನಿಜ.

ಕಾರ್ಮಿಕನು ಪ್ರತಿ ತಿಂಗಳು ರೂ. 100.00 ಗಳಂತೆ ಹತ್ತು ತಿಂಗಳು ಪಾವತಿಸಿದಲ್ಲಿ ಕೇಂದ್ರ ಸರ್ಕಾರವು 'ಸ್ವಾವಲಂಬನ' ಯೋಜನೆ ಅಡಿ ಒಂದು ವರ್ಷಕ್ಕೆ ರೂ. 1,000.00 ಗಳ ವಂತಿಕೆಯನ್ನು ನೀಡುತ್ತದೆ.

ರಾಜ್ಯ ಸರ್ಕಾರವು ಪ್ರತಿ ತಿಂಗಳು ರೂ. 100.00 ರಂತೆ ಒಂದು ವರ್ಷ ರೂ. 1,200.00 ಗಳನ್ನು ವಂತಿಕೆದಾರನ ಪಿಂಚಣಿ ಖಾತೆಗೆ – ಜಮಾ ಮಾಡುತ್ತದೆ.

ರಾಜ್ಯಸರ್ಕಾರವು ಇದಕ್ಕಾಗಿ 20 ಕೋಟಿ ರೂ.ಗಳ ಆಯವ್ಯಯವನ್ನು 2010–11ನೇ ಸಾಲಿನಲ್ಲಿ ನಿಗಧಿ ಪಡಿಸಿದೆ.

ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಇದಕ್ಕಾಗಿ ಈ ತನಕ ಯಾವುದೇ ನೆರವು ಬಂದಿರುವುದಿಲ್ಲ.

ಇ) ಈ ಯೋಜನೆಯು ಇನ್ನೂ ಪ್ರಾರಂಭಿಕ ಹಂತದಲ್ಲಿ ಇರುವ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ಯೋಜನೆಯು ಜಾರಿಗೆ ಬಂದ ನಂತರ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಬಾಲ ಕಾರ್ಮಿಕರಿಗೆ ಪರಿಹಾರ